ಕರಾಸಕೈಅನಿನಿ

**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**

**(ಕರ್ನಾಟಕ ಸರ್ಕಾರದ ಒಂದು ಉದ್ಯಮ)**

**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

---

ಸಂಖ್ಯೆ:ವ್ಯ.ನಿ: ಬಾಡಿಗೆ:ಕಂತು:ಬಡ್ಡಿರಹಿತ:ಮುಂದೂಡು:2020-21 ದಿನಾಂಕ: 01-09-2020

## ಕಛೇರಿ ಆದೇಶ

ವಿಷಯ: ನಿಗಮದ ಮಳಿಗೆ/ನಿವೇಶನ/ಗೋದಾಮು/ಸಂಕೀರ್ಣ ಮಳಿಗೆ ಬಾಡಿಗೆ ಮತ್ತು ಕಂತು ಹಾಗೂ ನೀರಿನ ಶುಲ್ಕ, ಸೇವಾ ಶುಲ್ಕಗಳನ್ನು 03 ತಿಂಗಳ ಕಾಲ ಬಡ್ಡಿ ರಹಿತವಾಗಿ ಪಾವತಿಸಿಕೊಳ್ಳಲು ಅನುಮೋದನೆ ನೀಡುವ ಕುರಿತು.

ಉಲ್ಲೇಖ:
1. ವ್ಯ.ನಿ:ಕೈವ:ಬಾಡಿಗೆ:ಕಂತು:ಬಡ್ಡಿರಹಿತ:ಮುಂದೂಡಿಕೆ:2020-21 ದಿನಾಂಕ: 06-05-2020.
2. ಪೀಠಾಧಿಕಾರಿ(ಸ.ಪ್ರ.ಕೈ),ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ರವರ ಪತ್ರ ಸಂಖ್ಯೆ: ಸಿಐ-75:ಸಿಎಸ್‌ಸಿ-2020 ದಿನಾಂಕ: 18-06-2020.
3. ವ್ಯನಿ ಕೈವ:ಬಾಡಿಗೆ:ಕಂತು:ಬಡ್ಡಿರಹಿತ:ಮುಂದೂಡು:2020-21 ದಿನಾಂಕ: 09-07-2020.
4. ಸರ್ಕಾರದ ಅಧೀನ ಕಾರ್ಯದರ್ಶಿ(ಸ.ಪ್ರ.ಕೈ)ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಪತ್ರ ಸಂಖ್ಯೆ:ಸಿಐ-75:ಸಿಎಸ್‌ಸಿ-2020 ದಿನಾಂಕ: 20-08-2020.

**************

ರಾಜ್ಯ/ದೇಶ/ಪ್ರಪಂಚದಾದ್ಯಂತ ಕೋವಿಡ್-19 ಮಹಾಮಾರಿಯು ಹರಡುತ್ತಿದ್ದು, ಇದನ್ನು ನಿಯಂತ್ರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಕ್ರಮಗಳನ್ನು/ನಿಯಮಗಳನ್ನು ದೇಶದಾದ್ಯಂತ ಅನ್ವಯಿಸುವಂತೆ ಜಾರಿಗೆ ತಂದಿರುತ್ತದೆ. ಅದರಲ್ಲಿ ದಿನಾಂಕ: 23.03.2020 ರಿಂದ ಜಾರಿಗೆ ಬರುವಂತೆ ಪ್ರಸ್ತುತ ದಿನಾಂಕ: 17.05.2020 ರವರೆಗೆ ಲಾಕ್‌ಡೌನ್ ಘೋಷಿಸಿರುತ್ತದೆ. ಇದರ ಅನ್ವಯ ಎಲ್ಲಾ ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ ಕೆಲವು ನಿರ್ದೇಶನಗಳನ್ನು ನೀಡಿದ್ದು, ಅವುಗಳಲ್ಲಿ ಯಾವುದೇ ರೀತಿಯ ಬಾಡಿಗೆ ಮತ್ತು ಕಂತುಗಳನ್ನು 3 ತಿಂಗಳುಗಳ ಕಾಲ ಬಡ್ಡಿ ರಹಿತವಾಗಿ ಪಾವತಿಗೆ ಮುಂದೂಡಲ್ಪಟ್ಟು ವಸೂಲು ಮಾಡಿಕೊಳ್ಳುವಂತೆ ಸೂಚಿಸಿರುತ್ತದೆ.

ಈ ಸಂಬಂಧ ಉಲ್ಲೇಖಿತ ಪತ್ರ 1 ರಲ್ಲಿ ನಿಗಮದ ರಾಜ್ಯದಾದ್ಯಂತ ಇರುವ ಕೈಗಾರಿಕಾ ವಸಾಹತುಗಳ ಮಳಿಗೆ/ನಿವೇಶನ/ಗೋದಾಮು/ಸಂಕೀರ್ಣ ಮಳಿಗೆಗಳನ್ನು ಬಾಡಿಗೆ ಮತ್ತು ಕಂತು ಖರೀದಿ ಆಧಾರದ ಮೇಲೆ ಹಂಚಿಕೆ ಮಾಡಲಾಗಿದ್ದು, ಸದರಿ ಘಟಕಗಳಿಂದ ಕಾಲಕಾಲಕ್ಕೆ ಬಾಡಿಗೆ / ಕಂತು, ಸೇವಾ ಶುಲ್ಕ, ನೀರಿನ ಶುಲ್ಕಗಳನ್ನು ಬಡ್ಡಿ ರಹಿತವಾಗಿ ಪಾವತಿಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರಲಾಗಿತ್ತು.

ಅದರಂತೆ ಉಲ್ಲೇಖಿತ ಪತ್ರ 2 ರಲ್ಲಿ ಮಳಿಗೆ/ನಿವೇಶನ/ಗೋದಾಮು/ಸಂಕೀರ್ಣ ಮಳಿಗೆಗಳ ಬಾಡಿಗೆ ಮತ್ತು ಕಂತು ಹಾಗೂ ನೀರಿನ ಶುಲ್ಕಗಳನ್ನು ಮುಂದೂಡಲ್ಪಟ್ಟಂತೆ ಏಪ್ರಿಲ್-2020 ತಿಂಗಳ ಕಂತು/ಬಾಡಿಗೆಯನ್ನು ಜೂನ್ ತಿಂಗಳ ಜೊತೆಗೆ, ಮೇ ತಿಂಗಳ ಬಾಡಿಗೆಯನ್ನು ಜುಲೈ ತಿಂಗಳ ಜೊತೆಗೆ, ಜೂನ್ ತಿಂಗಳ ಕಂತು/ಬಾಡಿಗೆಯನ್ನು ಆಗಸ್ಟ್ ತಿಂಗಳ ಜೊತೆಗೆ ವಿಧಿಸಲು ಸರ್ಕಾರವು ಅನುಮೋದನೆ ನೀಡಿರುತ್ತದೆ. ಅದರಂತೆ ಈ ಕೆಳಕಂಡಂತೆ ಆದೇಶಿಸಿಲಾಗಿದೆ.

## ಆದೇಶ

ನಿಗಮದ ಮಳಿಗೆ/ನಿವೇಶನ/ಗೋದಾಮು/ಸಂಕೀರ್ಣ ಮಳಿಗೆಗಳ ಬಾಡಿಗೆ ಮತ್ತು ಕಂತು ಹಾಗೂ ನೀರಿನ ಶುಲ್ಕಗಳನ್ನು ಮುಂದೂಡಲ್ಪಟ್ಟಂತೆ ಏಪ್ರಿಲ್-2020 ತಿಂಗಳ ಕಂತು/ಬಾಡಿಗೆಯನ್ನು ಜೂನ್ ತಿಂಗಳ ಜೊತೆಗೆ, ಮೇ ತಿಂಗಳ ಬಾಡಿಗೆಯನ್ನು ಜುಲೈ ತಿಂಗಳ ಜೊತೆಗೆ, ಜೂನ್ ತಿಂಗಳ ಕಂತು/ಬಾಡಿಗೆಯನ್ನು ಆಗಸ್ಟ್ ತಿಂಗಳ ಜೊತೆಗೆ ಬಡ್ಡಿರಹಿತವಾಗಿ ಎಲ್ಲಾ ಕೈಗಾರಿಕಾ ವಸಾಹತುಗಳ ಹಂಚಿಕೆದಾರರಿಗೂ ಬೇಡಿಕೆ ನೀಡಿ ಪಾವತಿಸಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

(ಮಹೇಶ್ ಬಿ. ಶಿರೂರ್)
ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.

**ಪ್ರತಿ:**

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ &ಸಮನ್ವಯ)/(ಸಾ.ಸಂ & ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಆ.ಲೆ.ಪ)/(ವಾಣಿಜ್ಯ)/ವಲಯ-1/ವಲಯ-2,ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲೆ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
9. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.

**ಸೂಚನೆ:** ಈ ಬಗ್ಗೆ ಅಗತ್ಯವಿರುವ ಮಾಹಿತಿಯನ್ನು ಹಣಕಾಸು ವಿಭಾಗದಿಂದ ಪಡೆಯಲು ಸೂಚಿಸಲಾಗಿದೆ.